9) ಮೂಲಭೂತ ಸೌಕರ್ಯ ಹೆಚ್ಚಿಸಲು ಗ್ರಾಮಾಂತರ ಪ್ರದೇಶದಲ್ಲಿರುವ ಕಟ್ಟಡಗಳಿಲ್ಲದ ಪಶು ಚಿಕಿತ್ಸಾ ಕೇಂದ್ರಗಳಿಗೆ ಹೊಸ ಕಟ್ಟಡ ನಿರ್ಮಾಣವನ್ನು ಆರ್ ಐ ಡಿ ಎಫ್ 11ರ ಅಡಿಯಲ್ಲಿ 14 83 ಕೋಟಿ ರೂ ಗಳಲ್ಲಿ ವೆಚ್ಚದಲ್ಲಿ 171 ಕಟ್ಟಡ ನಿರ್ಮಾಣಕ್ಕೆ, ಆರ್ ಐ ಡಿ ಎಫ್ 12ರ ಅಡಿಯಲ್ಲಿ 15 00 ಕೋಟಿ ರೂ ಗಳ ಅನುದಾನದಲ್ಲಿ 150 ಕಟ್ಟಡಗಳಿಗೆ ಮಂಜೂರಾತಿ ನೀಡಲಾಗಿದೆ

10) ಕುರಿಗಾರರ ಕುರಿಗಳಿಗೆ ಜನಶ್ರೀ ವಿಮಾ ರಕ್ಷಣೆ ಒದಗಿಸಲು 2006–07 ನೇ ಸಾಲಿನಿಂದ ಯೋಜನೆ ಜಾರಿಗೊಳಿಸಲಾಗಿದೆ

11) ಡೈರಿ ಅಭವೃದ್ಧಿ ಪ್ರೋತ್ಸಾಹಕ್ಕಾಗಿ ಗುಲ್ಬರ್ಗಾದಲ್ಲಿ 2007–08 ನೇ ಸಾಲಿನಿಂದ ಡೈರಿ ವಿಜ್ಞಾನ ಕಾಲೇಜು ಸ್ಥಾಪನೆಗೆ ಕ್ರಮ ವಹಿಸಿದೆ

12) ಜಾನುವಾರುಗಳಲ್ಲಿ ಹುಚ್ಚುನಾಯಿ ಕಡಿತಕ್ಕೆ ಲಸಿಕೆ ಉತ್ಪಾದನೆಗಾಗಿ ಬೆಳಗಾಂನಲ್ಲಿ ಹುಚ್ಚುನಾಯಿ ಲಸಿಕೆ ಉತ್ಪಾದನಾ ಸಂಸ್ಥೆ ಸ್ಥಾಪನೆಗೆ 2007–08ನೇ ಸಾಲಿನಲ್ಲಿ ಕ್ರಮ ವಹಿಸಿದೆ

13) ಮಲೆನಾಡ ಪ್ರದೇಶದಲ್ಲಿ ಕಂಡು ಬರುವ ಜಾನುವಾರುಗಳ ನಿಗೂಢ ಖಾಯಿಲೆಗಳ ಸಂಶೋಧನೆಗಾಗಿ ಶಿವಮೊಗ್ಗದಲ್ಲಿ ಆರೋಗ್ಯ ಹಾನಿಕರ ವಸ್ತುಗಳ ಅಧ್ಯಯನ ಕೇಂದ್ರ ಸ್ಥಾಪನೆಗೆ ಕ್ರಮ ವಹಿಸಿದೆ

14) ಗುಲ್ಬರ್ಗಾ, ಬೀದರ್, ರಾಯಚೂರು, ಬಳ್ಳಾರಿ, ಕೊಪ್ಪಳ ಜಿಲ್ಲೆಗಳ ಡೈರಿ ಅಭಿವೃದ್ಧಿಗಾಗಿ ರೂ 600 00 ಲಕ್ಷಗಳ ಅನುದಾನ ನಿಗಧಿಪಡಿಸಿ ಕರ್ನಾಟಕ ಹಾಲು ಮಹಾ ಮಂಡಳಿ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ

15) ಮಹಿಳೆಯರಿಗಾಗಿ ಹೈನುಗಾರಿಕೆಗೆ ಅಮೃತ ಯೋಜನೆಯಡಿ ರೂ 50 00 ಕೋಟಿ ರೂ ಗಳ ಅನುದಾನದಲ್ಲಿ ಅನುಷ್ಠಾನಗೊಳಿಸಲು ಯೋಜನೆ ಹಾಕಿಕೊಳ್ಳಲಾಗಿದೆ

680 (1123) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) – ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದ ಯಾವ ಯಾವ ನಗರಗಳಲ್ಲಿ ಮೆಡಿಕಲ್ ಕಾಲೇಜ್, ನರ್ಸಿಂಗ್ ಕಾಲೇಜ್ ಹಾಗೂ ಡಿ ಫಾರ್ಮಾ ಕಾಲೇಜ್‌ಗಳನ್ನು ಪ್ರಾರಂಭಿಸಲು ಸರ್ಕಾರ ಯೋಜನೆ ಹಾಕಿಕೊಂಡಿದೆ (ವಿವರ ಒದಗಿಸುವುದು) ,

(ಆ) ಧಾರವಾಡ ಜಿಲ್ಲೆ ಹುಬ್ಬಳ್ಳಿ ನಗರದಲ್ಲಿರುವ ಕಿಮ್ಸ್ ಆಸ್ಪತ್ರೆಯ ಹೊರ ರೋಗಿಗಳ ವಿಭಾಗದಿಂದ 2003–04, 2004–05, 2005–06, 2006–07ನೇ ಸಾಲಿನಲ್ಲಿ ರೂ 74,73,850/–ಗಳು ಸಂಗ್ರಹವಾಗಿದ್ದು, ಸಂಗ್ರಹವಾಗಿರುವ ಹಣದ ದುರುಪಯೋಗವಾಗಿರುವ ಸಂಶಯದ ಮೇಲೆ ತನಿಖೆಗೆ ಆದೇಶಿಸಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ ಅಂತಾ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2538 ದಿನಾಂಕ 05–04–2007ರಂದು ತಿಳಿಸಿರುವುದು ಸರ್ಕಾರದ ಗಮನದಲ್ಲಿದೆಯೇ ,

(ಇ)ಹಾಗಿದ್ದಲ್ಲಿ, ಈವರೆಗೆ ತನಿಖೆಯಿಂದ ಆಗಿರುವ ವರದಿಯನ್ನು ಆಧರಿಸಿ ಸರ್ಕಾರ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಂಡಿದೆ ?

ಡಾ ಏ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) –

(ಅ) ರಾಮನಗರದಲ್ಲಿ ಒಂದು ಹೊಸ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸುವ ಯೋಜನೆ ಸರ್ಕಾರದಲ್ಲಿ ಇರುತ್ತದೆ ರಾಮನಗರ ಮತ್ತು ಗುಲ್ಬರ್ಗಗಳಲ್ಲಿ ತಲಾ ಒಂದು ನರ್ಸಿಂಗ್ ಕಾಲೇಜ್ ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆ ಮತ್ತು ರಾಜ್ಯದ ಯಾವುದೇ ನಗರದಲ್ಲಿ ಡಿ ಫಾರ್ಮ ಕಾಲೇಜನ್ನು ಪ್ರಾರಂಭಿಸುವ ಯೋಜನೆ ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ

(ಆ) ಹೌದು

(ಇ) ವಿಚಾರಣಾ ವರದಿಯನ್ನು ನಿರೀಕ್ಷಿಸಲಾಗಿದ್ದು, ಅದು ಬಂದ ಕೂಡಲೇ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು

ಮೀಸಲಾತಿ ಅವಕಾಶವನ್ನು ನ್ಯಾಯ ಸಮ್ಮತವಾಗಿ ದೊರಕಿಸಿಕೊಡುವುದು

681 (1125) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) – ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಮೀಸಲಾತಿ ಅವಕಾಶವು ನ್ಯಾಯ ಸಮ್ಮತವಾಗಿ ದೊರೆಯದಿರುವ ರಾಜ್ಯದ ಅನುಸೂಚಿತ ಜಾತಿಗಳ ನಿರ್ದಿಷ್ಟ ಜಾತಿಗಳು, ಜನಾಂಗಗಳು ಹಾಗೂ ಬುಡಕಟ್ಟುಗಳಿಗೆ ಗುರುತಿಸುವುದಕ್ಕಾಗಿ ಈಗಾಗಲೆ ನಿವೃತ್ತ ನ್ಯಾಯಮೂರ್ತಿ ಶ್ರೀ ಎ ಜೆ ಸದಾಶಿವ ವಿಚಾರಣಾ ಆಯೋಗವನ್ನು ರಚಿಸಿದ್ದು, ಆಯೋಗವು ನೀಡುವ ವರದಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 167 ದಿನಾಂಕ 01–02–2007ರಂದು ತಿಳಿಸಿದ್ದು ಈವರೆಗೂ ಕ್ರಮ ಕೈಗೊಳ್ಳದೇ ಇರುವುದು ಸರಕಾರದ ಗಮನದಲ್ಲಿದೆಯೇ ,

ಆ) ಹಾಗಿದ್ದಲ್ಲಿ, ನಿವೃತ್ತ ನ್ಯಾಯಮೂರ್ತಿ ಶ್ರೀ ಎ ಜೆ ಸದಾಶಿವ ವಿಚಾರಣಾ ಅಯೋಗದ ವರದಿಯನ್ನು ನೀಡಲು ಎಷ್ಟು ಕಾಲಾವಕಾಶವನ್ನು ನೀಡಲಾಗಿದೆ ಹಾಗೂ ವರದಿ ಬಂದನಂತರ ಎಷ್ಟು ಕಾಲಾವಕಾಶದಲ್ಲಿ ಕ್ರಮ ಕೈಗೊಳ್ಳಲಾಗುವುದು

ಇ) ಹಿಂದುಳಿದ ವರ್ಗಗಳಿಗೆ ಸಂಬಂದಪಟ್ಟಂತೆ ಸರಕಾರವು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವನ್ನು ರಚಿಸಿದ್ದು, ಪ್ರಸ್ತುತ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡುವ ವಿಷಯ ಪರಿಶೀಲನೆಯಲ್ಲಿದ್ದು, ನೇಮಕವಾದ ನಂತರ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮನೆ ಮನೆ ಸಮೀಕ್ಷಾ ಕಾರ್ಯವನ್ನು ನಡೆಸಿ ಆಯೋಗವು ನೀಡುವ ವರದಿಯನ್ವಯ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಚುಕ್ಕೆ